INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -1, January--February, 2025,
PageNo,20- 26
Peer -Reviewed, Refereed Journal

# ರಾಜಾವಳಿ ಕಥಾಸಾರದಲ್ಲಿ ಕಂಠೀರವ ನರಸರಾಜ ಒಡೆಯರ ಆಡಳಿತದ ಚಿತ್ರಣ

ದೀಪಿಕಾ.ಬಿ.ಎಸ್.[1]

ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯ ವೈಭವವನ್ನು ಸಾರಿದ ಕವಿಗಳಲ್ಲಿ ದೇವಚಂದ್ರನು ಒಬ್ಬ, ಈತನ ಕಾಲವನ್ನು ೧೭೭೦ ರಿಂದ ೧೮೪೨ರವರೆಗೆ ಗುರುತಿಸಬಹುದು. ಈತನ ತಂದೆ ದೇವಯ್ಯ, ತಾಯಿ ಕುಸುಮಾಜಮ್ಮ ಈತ ಕನಕಗಿರಿಯ ಪಾರ್ಶ್ವನಾಥ ಬಸದಿಯಲ್ಲಿ ಅರ್ಚಕ ವೃತ್ತಿಯನ್ನು ನಿರ್ವಹಿಸುತ್ತಿದ್ದವನು. ಈತ ಸುಮಾರು ೧೨ ಕೃತಿಗಳನ್ನು ರಚಿಸಿರುವುದಾಗಿ ಹೇಳಿದ್ದಾನೆ. ಆ ಕೃತಿಗಳ ಪಟ್ಟಿಗಳನ್ನು ರಾಜಾವಳಿ ಕಥಸಾರದಲ್ಲಿ ನೀಡಿದ್ದಾನೆ. ಆದರೆ ದೊರಕಿರುವುದು ಮಾತ್ರ ನಾಲ್ಕು ಕೃತಿಗಳು. ಅವುಗಳಾವುವೆಂದರೆ 'ಪೂಜ್ಯಪಾದ ಚರಿತೆ', 'ರಾಮಕಥಾವತಾರ', 'ಭಕ್ತಿಸಾರ ಶತಕತ್ರಯ', 'ರಾಜಾವಳಿ ಕಥಾಸಾರ', ವಿದ್ವಾಂಸ ಕುಟುಂಬದಲ್ಲಿ ಬೆಳೆದಂತಹ ದೇವಚಂದ್ರನ ವಿದ್ವತ್ತು ವಿದೇಶಿಯರ ಗಮನವನ್ನು ಸಹ ತನ್ನತ್ತ ಸೆಳೆದಿತ್ತು ಎಂಬುದಕ್ಕೆ ಸಾಕ್ಷಿ ಆತನ ಪ್ರಸಿದ್ಧವಾದ ಕೃತಿ ರಾಜಾವಳಿ ಕಥಾಸಾರ. ಈ ರಾಜಾವಳಿ ಕಥಾಸಾರವು ಅಂದಿನ ಮೈಸೂರು ಪ್ರಾಂತ್ಯದಲ್ಲಿ ಸರ್ವೇಯರಾಗಿ ನೇಮಕಗೊಂಡ ಕರ್ನಲ್ ಕಾಲಿನ್ ಮೆಕೆಂಜಿಯು ಆ ಸೀಮೆಯ ಪೈಮಾಸಿ ಮಾಡಲೆಂದು ಲಕ್ಷ್ಮಣರಾಯನೊಂದಿಗೆ ಮಲೆಯೂರಿಗೆ ಬಂದು ದೇವಚಂದ್ರನನ್ನು ಭೇಟಿ ಮಾಡಿ "ಸ್ಥಳಪುರಾಣ ಮುಂಟೆ" ಎಂದು ಕೇಳಿದಾಗ ದೇವಚಂದ್ರನು ತಾನು ರಚಿಸಿದ ಪೂಜಾಪಾದ ಚರಿತೆಯನ್ನು ಓದಿ ಹೇಳಿದನು. ಆತ ದೇವಚಂದ್ರನನ್ನು ಕಮರಹಳ್ಳಿ ಬಳಿಯಲ್ಲಿ ಇದ್ದಂತಹ ಗುಡಾರದಲ್ಲಿರಿಸಿಕೊಂಡು ಅವನು ಹೇಳಿದ ಪೂರ್ವದ ಪ್ರಪಂಚಗಳನ್ನು ಕೇಳಿ ಅವನನ್ನು ಎರಡು ತಿಂಗಳುಗಳ ಕಾಲ ತನ್ನೊಂದಿಗೆ ಸ್ಥಳ ವೀಕ್ಷಣೆಯ ಕಾರ್ಯಕ್ಕೆ ಕರೆದುಕೊಂಡು ಹೋಗಿ ಅನೇಕ ವಿವರಗಳನ್ನು ಸಂಗ್ರಹಿಸಿಕೊಂಡನು. ತರುವಾಯ ದೇವಚಂದ್ರನನ್ನು ಸಹ ಬಂಗಾಳಕ್ಕೆ ಕರೆದೊಯ್ಯಬೇಕೆಂದಿದ್ದನು.

ಆದರೆ ದೇವಚಂದ್ರನು ಒಪ್ಪದ ಕಾರಣ ಕರ್ನಾಟಕ ದೇಶದೊಳು ನಡೆದ ಪ್ರಪಂಚುಗಳನೆಲ್ಲ ಕ್ರೋಢಿಕರಿಸಿಕೊಂಡು ಬಂದು ಬರೆದು ನಾವು ಇದ್ದಲ್ಲಿಗೆ ತಿಂಗಳೊಳಗೆ ಬರಬೇಕೆಂದು ಲಕ್ಷ್ಮಣರಾಯನ

**[1].ಸಂಶೋಧನಾ ವಿದ್ಯಾರ್ಥಿನಿ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.**

ಮುಖಾಂತರ ೨೫ ಕುಂಪಣಿ ರೂಪಾಯಿಗಳನ್ನು ದೇವಚಂದ್ರನಿಗೆ ಕೊಡಿಸಿದನು. ಇದುವೇ ರಾಜಾವಳಿ ಕಥಾಸಾರದ ಉದಯಕ್ಕೆ ಕಾರಣವೆನ್ನಬಹುದು. ಗದ್ಯ ಪ್ರಧಾನವಾದ ಈ ರಾಜಾವಳಿ ಕಥಾಸಾರವು ಕರ್ನಾಟಕದ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಅಧ್ಯಯನ ದೃಷ್ಟಿಯಿಂದ ಇದೊಂದು ಮಹತ್ವದ ಕೃತಿಯಾಗಿದೆ. ಇದು ಮೊದಲು ೧೧ ಅಧ್ಯಾಯಗಳನ್ನು ಒಳಗೊಂಡಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ ಮಹಾಮಾತೃಶ್ರೀಯವರಾದ ದೇವಿರಾಂಬೆಯವರ ಆದೇಶದ ಮೇರೆಗೆ ಮೈಸೂರು ಒಡೆಯರ ಇತಿಹಾಸವನ್ನು ವಿಸ್ತಾರವಾಗಿ ಬರೆಯಲಾಯಿತು. ಅದೇ ನಂತರದ ಎರಡು ಅಧ್ಯಾಯಗಳ ಸೇರ್ಪಡೆಗೆ ಕಾರಣವಾಗಿ ಕೃತಿಯು ವಿಸ್ತಾರಗೊಂಡಿತು. ಈ ರಾಜಾವಳಿ ಕಥೆಯು ಮೈಸೂರು ಒಡೆಯರ ಇತಿಹಾಸವನ್ನು ಕುರಿತಾದ ಅನೇಕ ವಿಶೇಷ ಅಂಶಗಳನ್ನು ನಮ್ಮ ಮುಂದೆ ತೆರೆದಿರುತ್ತದೆ.

ದಕ್ಷಿಣ ಭಾರತದ ರಾಜಕೀಯ ಚರಿತ್ರೆಯಲ್ಲಿ ಮೈಸೂರಿನ ಅರಸರ ಪಾತ್ರವು ಬಹು ಮುಖ್ಯವಾದುದ್ದಾಗಿದೆ. ಇವರ ಆಡಳಿತಾವಧಿಯಲ್ಲಿ ಕರ್ನಾಟಕವು ವಿಸ್ತಾರವಾಗಿ ಸಮೃದ್ಧವಾಗಿ ಬೆಳೆದು, ಪ್ರಜಾಹಿತ ಅಭಿವೃದ್ಧಿ ಕಾರ್ಯಗಳು ಜರುಗಿದವು. ಇವರ ಸುಮಾರು ಐದೂವರೆ ಶತಮಾನಗಳ ಆಳ್ವಿಕೆಯಲ್ಲಿ ೨೫ ಮಂದಿ ಅರಸರನ್ನು ಗುರುತಿಸಬಹುದಾಗಿದೆ. ಕವಿ ದೇವಚಂದ್ರನು ತನ್ನ ಪ್ರಸಿದ್ಧ ಕೃತಿಯಾದ ರಾಜಾವಳಿ ಕಥಾಸಾರದಲ್ಲಿ ಮೈಸೂರಿನ ಅರಸರ ಮೂಲದಿಂದಿಡಿದು ಮುಮ್ಮಡಿ ಕೃಷ್ಣರಾಜ ಒಡೆಯರವರೆಗಿನ ಚರಿತ್ರೆಯನ್ನು ವಿಸ್ತಾರವಾಗಿ ಕಟ್ಟಿಕೊಟ್ಟಿದ್ದಾನೆ. ಅವರಲ್ಲಿ ಕೆಲವು ಅರಸರ ಆಳ್ವಿಕೆಯು ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದೆ. ಅದರಲ್ಲಿ ಕಂಠೀರವ ನರಸರಾಜ ಒಡೆಯರ ಆಡಳಿತವು ಸಹ ಒಂದು.

ದೇವಚಂದ್ರನು ಕಂಠೀರವ ನರಸರಾಜ ಒಡೆಯರ ಸಾಹಸ, ಶೌರ್ಯ, ಪರಾಕ್ರಮ, ಯುದ್ಧ ನೀತಿ ಹಾಗೂ ಅವರ ಆಡಳಿತ ವೈಖರಿಗಳಿಂದ ಮೈಸೂರು ರಾಜ್ಯಕ್ಕೆ ಭದ್ರಾ ಬುನಾದಿಯನ್ನು ಹಾಕಿದ ಚಿತ್ರಣವನ್ನು ನೀಡಿದ್ದಾನೆ. ಕಂಠೀರವ ನರಸರಾಜ ಒಡೆಯರ್ ರವರು ರಾಜ ಒಡೆಯರ ಸಹೋದರರಾದ ನಾಲ್ಕನೇ ಬೆಟ್ಟದ ಚಾಮರಾಜ ಒಡೆಯರ್ ರವರ ಪುತ್ರ. ಶೂರ ಪರಾಕ್ರಮಿಯು ಆಗಿದ್ದಂತಹ ಕಂಠೀರವ ನರಸರಾಜರು ಮಲ್ಲಯುದ್ಧದಲ್ಲಿ ಆನೆ, ಕುದುರೆ ಸವಾರಿಗಳಲ್ಲಿ ಹಾಗೂ ಕತ್ತಿವರಸೆಯಲ್ಲಿ ಪ್ರಾವೀಣ್ಯತೆಯನ್ನು ಸಾಧಿಸಿದ್ದರು. ಇದಕ್ಕೆ ಸಾಕ್ಷಿ ಎನ್ನುವಂತೆ ಇವರು ಒಮ್ಮೆ ತಿರುಚನಾಪಳ್ಳಿಗೆ ಮಾರುವೇಶದಲ್ಲಿ ಹೋಗಿ ದುರಹಂಕಾರಿಯಾಗಿ ಮೆರೆಯುತ್ತಿದ್ದಂತಹ ಜಟ್ಟಿಯನ್ನು ಜಯಿಸಿ ಆತನನ್ನು ಅವರ ಪಟ್ಟದಕತ್ತಿಯಿಂದ ಕೊಂದು ಹಿಂತಿರುಗಿ ಬಂದ ವಿಚಾರವನ್ನು ಗಮನಿಸಬಹುದು. ಹೀಗೆ ವೈರಿ ರಾಜರನ್ನು ಸೋಲಿಸಿ ಗಜಕಂಠೀರವನೆನೆಸಿದ ನರಸರಾಜರು ಯುವ ಸಂವತ್ಸರದಲ್ಲಿ ಅಂದರೆ ಕ್ರಿ.ಶ.೧೬೩೩ ರಲ್ಲಿ ಅಧಿಕಾರಕ್ಕೆ ಬಂದರು.

ಇವರು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ದಕ್ಷಿಣ ಭಾರತದ ರಾಜಕೀಯ ಪರಿಸ್ಥಿತಿಯು ಅಷ್ಟು ಉತ್ತಮವಾಗಿರಲಿಲ್ಲ. ಮುಸಲ್ಮಾನರ ದಾಳಿಯಿಂದಾಗಿ ಪರಿಸ್ಥಿತಿಯು ಹದಗೆಟ್ಟಿತ್ತು. ಬಿಜಾಪುರದ ಸುಲ್ತಾನರು ಹಾಗೂ ಗೋಲ್ಕೊಂಡದ ಶಾಹಿಗಳು ಮೈಸೂರಿನ ಮೇಲೆ ದಾಳಿ ಮಾಡಲು ಆರಂಭಿಸಿದರು. ಅಂತಹ ಪರಿಸ್ಥಿತಿಗಳನ್ನು ಕಂಠೀರವ ನರಸರಾಜರು ಸಮರ್ಥವಾಗಿ ಎದುರಿಸಿದ್ದು ಅವರ ರಾಜಕೀಯ ಸಾಧನೆಗಳಲ್ಲಿ ಮಹತ್ವದ್ದಾಗಿದೆ. ಇವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಆಡಳಿತದಲ್ಲಿ ಅನೇಕ ಬದಲಾವಣೆಗಳು ಉಂಟಾದವು. ತಮ್ಮ ಚಿಕ್ಕಯ್ಯನನ್ನು (ಎರಡನೇ ರಾಜಒಡೆಯರು) ವಿಷವಿಕ್ಕಿ ಕೊಂದಂತಹ ಹಾಗೂ ರಾಜ ಎಂಬುದನ್ನು ಲೆಕ್ಕಿಸದೆ ಅಧಿಕಾರದಿಂದ ಮತ್ತನಾಗಿದ್ದ, ದೇಶದ್ರೋಹಿಯು, ಕೊಲೆಗಾರನು ಆಗಿದ್ದ ದಳವಾಯಿ ವಿಕ್ರಮರಾಯನನ್ನು ಕೊನೆಗಾಣಿಸಿದರು. ಹಾಗೆಯೇ ಬೆಟ್ಟದಪುರ, ಹಂಪಾಪುರ, ಪಿರಿಯಾಪಟ್ಟಣ, ಹೊಸೂರು ಮುಂತಾದವರ ಸಹಾಯವನ್ನು ಪಡೆದು ಕಂಗೆಯ ಹನುಮನನ್ನು ಸೋಲಿಸಿದರು. ಹಾಗೆಯೇ ಬಿಜಾಪುರದ ಸುಲ್ತಾನ ಮಹಮ್ಮದ್‌ಆದಿಲ್ ಶಾ ಎಂಬುವವನು ಕರ್ನಾಟಕವನ್ನು ಲೂಟಿ ಮಾಡಲು ತನ್ನ ಸೇನಾಧಿಪತಿಯಾದ ರಣದುಲ್ಲಾಖಾನನನ್ನು ಕಳುಹಿಸಿದನು. ಈ ರಣದುಲ್ಲಾಖಾನನ ಸೇನೆಯ ವಿವರವನ್ನು ಸಹ ಕವಿ ನೀಡುತ್ತಾನೆ. ೪೦,೦೦೦ ಕುದುರೆ, ೪೬ ಲಕ್ಷ ಪಾಳಯದೊಂದಿಗೆ ಯುದ್ಧಕ್ಕೆ ಬಂದನೆಂದು ತಿಳಿಸುತ್ತಾನೆ. ಇಕ್ಕೇರಿಯನ್ನು ಗೆದ್ದಂತಹ ಖಾನನು ಕನ್ನಡ ನಾಡಿನಲ್ಲಿ ತನಗೆ ಸರಿಸಮ ಯಾರು ಇಲ್ಲವೆಂದು ಕೊಬ್ಬಿನಿಂದ ಬಂದು ಸೀರೆ (ಸಿರ )ಯಾದ ರಾಜನನ್ನು ಸೋಲಿಸಿ ಸೆರೆಹಿಡಿದ ವಿಚಾರವನ್ನು ರಾಜಾವಳಿಯು ದಾಖಲಿಸುತ್ತದೆ.

ರಣದುಲ್ಲಾ ಖಾನನು ಆ ಪ್ರದೇಶವನ್ನು ಸೂರೆ ಮಾಡಿ ಅಲ್ಲಿಯ ರಾಜನನ್ನು ಕೊಂದು ಶಿರಾ ಹಾಗೂ ಅದರ ಅವಲಂಬಿತ ಪ್ರಾಂತ್ಯಗಳನ್ನು ವಶ ಮಾಡಿಕೊಂಡು ಮಲ್ಲಿಕ್ ಹುಸೇನ್‌ನನ್ನು ಗವರ್ನರ್ ಆಗಿ ನೇಮಕ ಮಾಡಿದಂತೆ ತಿಳಿಯುತ್ತದೆ. ತರುವಾಯ ಖಾನನ ಸೈನ್ಯವು ಶ್ರೀರಂಗಪಟ್ಟಣದ ಬಳಿಯಲ್ಲಿ ನಿಂತಾಗ ಹನುಮಪ್ಪ ನಾಯಕನು ಖಾನನನ್ನು ತಡೆದ ವಿಚಾರವನ್ನು ಸಹ ಕವಿಯು ದಾಖಲಿಸುತ್ತಾನೆ. ನರಸರಾಜರ ಸೈನ್ಯವು ಬಲಶಾಲಿಯಾಗಿದ್ದು ಅವರ ಸಾಮರ್ಥ್ಯವನ್ನು ಹನುಮಪ್ಪ ನಾಯಕನು ಮೊದಲೇ ಅರಿತಿರುವುದನ್ನು ಇಲ್ಲಿ ಗಮನಿಸಬಹುದು. ಹಾಗೆಯೇ ಕಂಠೀರವ ನರಸರಾಜರು ವೀರಾವೇಶದಿಂದ ಹೋರಾಡಿ ಖಾನನ ಸೈನ್ಯವು ಹೆದರಿ ಓಡುವಂತೆ ಮಾಡಿದ ಒಂದು ಪ್ರಸಂಗದ ಚಿತ್ರಣವನ್ನು ಕವಿ ನೀಡಿದ್ದಾನೆ. ರಣದುಲ್ಲಾಖಾನನು ಹನುಮಪ್ಪ ನಾಯಕನಿಗೆ “ಎಲೆ ನಾಯಕ ನೀನೆಂದ ಮಾತು ನಿಜವಾಯಿತು. ನಾನು ವಿಜಯಪುರವನ್ನು ಬಿಟ್ಟಂದಿನಿಂದ ಇದುವರೆಗೆ ಈ ರೀತಿಯ ವೀರನನ್ನು ನೋಡಿಯೂ ಇಲ್ಲ, ಕೇಳಿದ್ದು ಇಲ್ಲ. ಇಲ್ಲಿ ಈತ ಇಷ್ಟು ಬಲಿಷ್ಟ ಎಂಬುವುದನ್ನು ಮೊದಲೇ ತಿಳಿಯದೆ ನನ್ನ ಸೈನ್ಯವೆಲ್ಲವನ್ನು ಬಲಿ ನೀಡಿದೆ. ನನ್ನ ಹಿಂದಿದ್ದ ಬಲವೆಲ್ಲವೂ ಹಾಳಾಯಿತು. ಇದನ್ನು ತಿಳಿದವರು ಇನ್ನೂ ಮೇಲೆತ್ತಿ ಬರದೆ ಇರಲಾರರು. ನನ್ನ ಶೌರ್ಯವೂ ಕುಂದಿ, ಸಾವಿರಾರು ವೀರರು ಮರಣ

ಹೊಂದಿದರು. ಇನ್ನು ನನಗೆ ಬೇರೆ ದಾರಿ ಇಲ್ಲ. ನಾನು ಈ ನಾಡಿನ ಗಡಿಯನ್ನು ದಾಟುವವರೆಗೆ ಈ ನಾಡುವರು ಮೇಲೆ ದಾಳಿ ಬೀಳದಂತೆ ರಾಯಸವನ್ನಿಯಿರಿ ನಾನು ಹೋಗುತ್ತೇನೆಂದು ಹೇಳಿದನು".[೧] ಈ ಪ್ರಸಂಗದಿಂದ ರಣದುಲ್ಲಾಖಾನನನ್ನು ಕಂಠೀರವ ನರಸರಾಜರು ಸಂಪೂರ್ಣವಾಗಿ ಸೋಲಿಸಿದ್ದರು ಎಂಬುವುದು ತಿಳಿಯುತ್ತದೆ. ಆದರೆ ಕೆಲವೊಂದು ದಾಖಲೆಗಳು ಕಂಠೀರವ ನರಸರಾಜರು ಸೋತು ಕಪ್ಪ ಕಾಣಿಕೆಯನ್ನು ಕೊಡಲು ಒಪ್ಪಿದರೆಂದು ತಿಳಿಸುತ್ತವೆ. ಆದರೆ ಅದೇನೆ ಆದರೂ ಬಿಜಾಪುರದ ಸುಲ್ತಾನನಿಂದ ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿದ್ದು ಕಂಠೀರವ ನರಸರಾಜರ ಸಾಧನೆಯೇ ಆಗಿದೆ. ಕಂಠೀರವ ನರಸರಾಜರು ಯುದ್ಧ ನೀತಿಯಲ್ಲಿ ಎಷ್ಟು ಸಮರ್ಥರು ಹಾಗೂ ಪ್ರಭಾವಶಾಲಿಯಾಗಿದ್ದರು ಎಂಬುದು ಈ ಪ್ರಸಂಗದಿಂದ ತಿಳಿಯುತ್ತದೆ.

ನರಸರಾಜರು ನಾಲ್ಕು ದಿಕ್ಕುಗಳಲ್ಲಿಯೂ ದಿಗ್ವಿಜಯದ ಯಾತ್ರೆಯನ್ನು ಕೈಗೊಂಡ ವಿವರವನ್ನು ಕವಿಯು ದಾಖಲಿಸುತ್ತಾನೆ. ಮೂಡಲಾಗಿ ನಡೆದು ವಿಜಯಪುರದ ಸೇನಾನಿ, ಖಾನ ಖಾನನ ಸೇನೆಯನ್ನು ಸೋಲಿಸಿ ರಾಯಕೋಟೆ, ರನ್ನಗಿರಿ, ರಾಮಗಿರಿ, ವೀರಭದ್ರನ ದುರ್ಗಾ, ಕೆಂಗೇರಿ, ಪೆನ್ನರುಗಳನ್ನು ವಶಪಡಿಸಿಕೊಂಡರು. ಆದರೆ ದೇವಚಂದ್ರ ಈತನ ಹೆಸರನ್ನು ಹೇಳದೆ ಕೇವಲ ಖಾನ ಖಾನ್ ಎಂದಷ್ಟೇ ಉಲ್ಲೇಖಿಸಿದ್ದಾನೆ. ವಿಜಯಪುರದ ಸೇನಾನಿಯಾದ ಖಾನ್–ಇ–ಖಾನನ್ ಎಂಬುವನೊಬ್ಬನನ್ನು ಹಯವದನರಾಯರು ಒಂದು ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ. ಕರ್ನಾಟಕದ ಮೇಲೆ ದಾಳಿಗೆ ಬಂದಾಗ ಕಂಠೀರವ ನರಸರಾಜರು ನಡೆಸಿದ ಆಕ್ರಮಣಕ್ಕೆ ಸಂಬಂಧಿಸಿರಬಹುದಾದ ಘಟನೆ ಇದಾಗಿರಬಹುದು ಎಂದು ರಾಗೌರವರು ಅಭಿಪ್ರಾಯಪಟ್ಟಿದ್ದಾರೆ.[೨] ರಾಮಗಿರಿಯ ಉಲ್ಲೇಖ ಕಂಠೀರವ ನರಸರಾಜ ವಿಜಯದಲ್ಲೂ ಬಂದಿದ್ದು ರಣದುಲ್ಲಾಖಾನನ ಪ್ರಸಕ್ತಿ ಇದ್ದು ಆ ಹಿನ್ನೆಲೆಯಲ್ಲಿ ಇಲ್ಲಿನ ಖಾನ ಖಾನ ರಣದುಲ್ಲಾಖಾನನೇ ಎಂದು ಅಭಿಪ್ರಾಯಪಡಬಹುದು. ಹೀಗೆ ವಿಜಯಪುರದ ಸೈನ್ಯವೂ ಎಂಟು ಬಾರಿ ಮೈಸೂರಿನ ಮೇಲೆ ದಾಳಿ ಮಾಡಿದ್ದು, ಕಂಠೀರವನರಸರಾಜರು ಅದೆಲ್ಲ ದಾಳಿಗಳನ್ನು ಸಮರ್ಥವಾಗಿ ಪ್ರತಿಭಟಿಸಿ ಸುವ್ಯವಸ್ಥಿತ ಆಡಳಿತ ನಡೆಸಿರುವುದು ನೋಡಬಹುದಾಗಿದೆ.

ದಕ್ಷಿಣಕ್ಕೆ ಹೋಗಿ ಮಧುರೆಯ ನಾಯಕರಾದ ವೀರಪ್ಪ ನಾಯಕ ಮತ್ತು ತಿರುಮಲ ನಾಯಕರನ್ನು ಸೋಲಿಸಿ ಸತ್ಯಮಂಗಲ, ಡಣಾಯಕನ ಕೋಟೆಗಳನ್ನು ವಶಪಡಿಸಿಕೊಂಡರು. ಕೊಂಗರು, ಕೆಳದಿಯವರನ್ನು ಸೋಲಿಸಿ ತೆಲುಗರ ಶಕ್ತಿಯನ್ನು ನಾಶಗೊಳಿಸಿ ವೀರಪ್ಪ ನಾಯಕನನ್ನು ರತ್ನಗಿರಿಯಲ್ಲಿರಿಸಿದರು. ವಿಜಯನಗರದ ಅರಸನಾದ ಶ್ರೀರಂಗರಾಯನಿಗೆ ಸಹಾಯ ಹಸ್ತವನ್ನು ನೀಡಿದರು. ವಿಜಯನಗರದ ಅವನತಿ ಹೊಂದಿದ ನಂತರ ಅವರು ತಮ್ಮ ಸ್ವತಂತ್ರವನ್ನು ಘೋಷಿಸಿಕೊಂಡರು. ಚಿಕ್ಕ ಕೆಂಪೇಗೌಡ (ಇಮ್ಮಡಿ ಕೆಂಪೇಗೌಡ)ನು ಬಿಜಾಪುರದ ಸುಲ್ತಾನನ ಸೇನಾಧಿಪತಿ ರಣದುಲ್ಲಾಖಾನನು ಬೆಂಗಳೂರಿನ ಮೇಲೆ ದಾಳಿ ಮಾಡಿ ಆಕ್ರಮಣ ನಡೆಸಿದಾಗ ಬೆಂಗಳೂರನ್ನು

ಬಿಟ್ಟುಕೊಟ್ಟು ಕಪ್ಪವನ್ನು ಕೊಡುವುದಾಗಿ ಒಪ್ಪಿಕೊಂಡು ಮಾಗಡಿಗೆ ಬಂದು ಅಲ್ಲಿಂದ ರಾಜ್ಯವಾಳಲು ಪ್ರಾರಂಭಿಸಿದನು. ಅಂದಿನಿಂದ ಮಾಗಡಿಯು ಕೆಂಪೇಗೌಡನ ರಾಜಧಾನಿಯಾಗಿತ್ತು. ಈತನ ಮೇಲೆ ದಾಳಿ ಮಾಡಿದ ಕಂಠೀರವ ನರಸರಾಜರು ಆತನು ಶರಣಾಗತನಾದಾಗ ಅಭಯವನ್ನು ನೀಡಿ ಯಲಹಂಕ ಮತ್ತು ಮಾಗಡಿಯನ್ನು ನೀಡಿ ಮನ್ನಿಸಿದರು. ಕಲ್ಲೂರು, ಕಡಬ, ತುರುಕೆರೆ, ಮಾಯಸಂದ್ರದೊಂದಿಗೆ ಪಶ್ಚಿಮಕ್ಕೆ ಹೋಗಿ ಪಿರಿಯಾಪಟ್ಟಣವನ್ನು ವಶಪಡಿಸಿಕೊಂಡರು. ಅಲ್ಲಿ ಮಲ್ಲರಾಜನನ್ನು ಸೆರೆ ಹಿಡಿದು ಪಿರಿಯಾಪಟ್ಟಣವನ್ನು ತಮ್ಮ ಮೈಸೂರು ರಾಜ್ಯಕ್ಕೆ ವಿಲೀನಗೊಳಿಸಿಕೊಂಡರು. ಬಡಗಲಾಗಿ ಹೋಗಿ ಮಲ್ಲುಕನ ದಳವನ್ನು ಗೆದ್ದರು. ತುರುಗೆರೆ, ಕಡಬ, ಕಲ್ಲೂರು, ಹೆಟ್ಟೂರುಗಳನ್ನು ವಶಪಡಿಸಿಕೊಂಡದ್ದು ಉತ್ತರದ ದಿಗ್ವಿಜಯವಾಗಿದೆ. ಈ ಉತ್ತರದ ದಿಗ್ವಿಜಯವು ಬಿಜಾಪುರದ ಸೈನ್ಯಕ್ಕೂ ನಂಜರಾಜನ ನೇತೃತ್ವದ ಮೈಸೂರಿನ ಸೈನ್ಯಕ್ಕೂ ತುರುವೇಕೆರೆ ಬಳಿ ನಡೆದ ಘರ್ಷಣೆಯ ಪರಿಣಾಮವನ್ನು ಇಲ್ಲಿ ಹೇಳಿದಂತಿದೆ. ಇದು ಕಂಠೀರವನರಸರಾಜ ಒಡೆಯರ ಸೈನಿಕ ಸಾಧನೆಯಾಗಿದೆ.

ಮುಂದೆ ಹಳೇಬೀಡರಸುಗಳ ಮಕ್ಕಳಾದ ಕುಸುಮಾಜಮ್ಮಣ್ಣಿ ಮತ್ತು ಕಮಲಾಜಮ್ಮಣ್ಣಿ ಎಂಬುವವರನ್ನು ವಿವಾಹವಾಗಿ ದೊಡ್ಡಿ ಎಂಬ ಬಂಗಾರದವರೊಂದಿಗೆ ಸುಖವಾಗಿದ್ದರೆಂದು ಕವಿಯು ಉಲ್ಲೇಖಿಸುತ್ತಾನೆ. ಆದ್ದರಿಂದ ಕಂಠೀರವ ನರಸರಾಜರಿಗೂ ಹಳೇಬೀಡರಸರಿಗೂ ವೈವಾಹಿಕ ಸಂಬಂಧವಿದ್ದುದ್ದನ್ನು ಇಲ್ಲಿ ಗುರುತಿಸಬಹುದು. ಅನಂತರ ನರಸರಾಜರು ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಕವಿ ತಿಳಿಸಿದ್ದಾನೆ. ಇವರು ತಮ್ಮ ಪ್ರೇಯಸಿ ಬಂಗಾರ ದೊಡ್ಡಿಯ ನೆನಪಿಗಾಗಿ ಶ್ರೀರಂಗಪಟ್ಟಣದ ಬಳಿಯಲ್ಲಿ ಬಂಗಾರದೊಡ್ಡಿ ಕಾಲುವೆಯನ್ನು ನಿರ್ಮಿಸಿದರು. ಗೋಮಟಪುರದ ಬಸ್ತಿ ದೇವರಿಗೆ ಮಾನ್ಯವನ್ನು ಕೊಟ್ಟರು. ಬೊಮ್ಮರಸ ಪಂಡಿತರು, ಶಾಂತ ಪಂಡಿತರು, ಪದ್ಮ ಪಂಡಿತರು, ರಾಜ ಪಂಡಿತರು ಹೀಗೆ ಅನೇಕರಿಗೆ ಉಂಬಳಿ ಸಂಬಳವನ್ನು ನೀಡಿದ್ದು, ಇವರ ಆಸ್ಥಾನದಲ್ಲಿ ಅನೇಕ ಪಂಡಿತರು ಆಶ್ರಯ ಪಡೆದಿದ್ದನ್ನು ಕವಿ ದಾಖಲಿಸಿದ್ದಾನೆ. ಹಾಗೆಯೇ ಪಿರಿಯಾಪಟ್ಟಣದ ಭುವನೇಶ್ವರಿ ಅರಮನೆಯಲ್ಲಿದ್ದ ಸರ್ವಾಭರಣವನ್ನು ಸಂಗ್ರಹಿಸಿ ಮಹಾಬಲಾಚಲದಲ್ಲಿ ವೃಷಭವನ್ನು ನಿರ್ಮಿಸಿದ ವಿಚಾರವನ್ನು ರಾಜಾವಳಿಯೂ ಉಲ್ಲೇಖಿಸುತ್ತದೆ. ಪಿರಿಯಾಪಟ್ಟಣದ ಭುವನೇಶ್ವರಿ ಅರಮನೆಯಿಂದ ಸರ್ವಭರಣವನ್ನು ತಂದ ವಿಚಾರವೂ ಶ್ರೀ ಮನ್ಮಮಹಾರಾಜ ವಂಶಾವಳಿಯಲ್ಲಿಯೂ ಸಹ ಉಲ್ಲೇಖಗೊಂಡಿದೆ.[೩] ಆದರೆ ಮಹಾಬಾಲಾಚಲದಲ್ಲಿ ನಂದಿ ವಿಗ್ರಹವನ್ನು ನಿರ್ಮಿಸಿದವರು ದೊಡ್ಡ ದೇವರಾಜ ಒಡೆಯರೆಂದು ಇತಿಹಾಸದಲ್ಲಿ ದಾಖಲಾಗಿದೆ. ಆದರೆ ಕಂಠೀರವ ನರಸರಾಜರ ಆಳ್ವಿಕೆಯಲ್ಲಿಯೇ ದಳವಾಯಿ ಆಗಿದ್ದಂತಹ ವಿಕ್ರಮರಾಜನು ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ನಂದಿ ವಿಗ್ರಹವನ್ನು ಸ್ಥಾಪಿಸಿದ ವಿಚಾರವನ್ನು ಸಹ ಗಮನಿಸಬಹುದಾಗಿದೆ.[೪] ಆದ್ದರಿಂದ ಕವಿಯು ಇಲ್ಲಿ ಗೊಂದಲಕ್ಕೆ ಒಳಗಾಗಿರಬಹುದೆನ್ನಬಹುದು.

ಜನಪರ ಹಾಗೂ ಉದಾರ ವ್ಯಕ್ತಿತ್ವವನ್ನು ಹೊಂದಿದ್ದ ನರಸರಾಜರು ತನ್ನ ಪ್ರಜೆಗಳು ತನ್ನಂತೆಯೇ ಬದುಕಬೇಕೆಂದು ಬಯಸಿ ಎತ್ತರವಾದಂತ ಶಿಲಾಮಯವಾದ ಗೋಪುರ, ಕೈಸಾಲೆ, ಮಂಟಪ, ದೇವಾಲಯಗಳನ್ನು ನಿರ್ಮಿಸಿ ಹಾಗೂ ತಮ್ಮ ಅರಮನೆಯ ಮುಂದೆ ನರಸಿಂಹ ದೇಗುಲವನ್ನು ಸ್ಥಾಪಿಸಿ ತನ್ನ ಭಂಡಾರದ ಮುತ್ತು, ರತ್ನ, ಪಚ್ಚೆಗಳಿಂದ ತಯಾರಿಸಿದ ಆಭರಣಗಳು, ಚಿನ್ನದ ಬಟ್ಟಲು, ತಟ್ಟೆ ಮುಂತಾದವುಗಳನ್ನು ನೀಡಿ ಉತ್ಸವಗಳನ್ನು ಆಚರಿಸಿದರು. ಹೀಗೆ ಇವರ ಕಾಲದಲ್ಲಿ ಮೈಸೂರು ರಾಜ್ಯವು ಗಮನಾರ್ಹವಾಗಿ ಬೆಳವಣಿಗೆ ಸಾಧಿಸಿದ್ದನ್ನು ಕುರಿತು ರಾಜಾವಳಿಯು ದಾಖಲಿಸುತ್ತದೆ. ಇವರು ನಿರ್ಮಿಸಿರುವ ಈ ದೇವಾಲಯ ಮೈಸೂರು ಅರಸರ ನಿರ್ಮಾಣಗಳಲ್ಲಿಯೇ ಅತಿ ಪ್ರಾಚೀನವಾದುದ್ದಾಗಿದೆ. ಈ ದೇವಾಲಯದಲ್ಲಿ ಇದರ ನಿರ್ಮಾತೃಗಳಾದಂತಹ ಕಂಠೀರವ ನರಸರಾಜ ಒಡೆಯರ ಕಲ್ಲಿನ ಭಕ್ತ ವಿಗ್ರಹವಿರುವುದನ್ನು ನೋಡಬಹುದು. ಅಷ್ಟೇ ಅಲ್ಲದೆ ಇವರು ನೀರಾವರಿಗೆ ಅನುಕೂಲವಾಗುವಂತೆ ಕಂಠೀರವ ಸಮುದ್ರ ಎಂಬ ಕೆರೆಯನ್ನು ಹಾಗೂ ಕಾಲುವೆಗಳನ್ನು ನಿರ್ಮಿಸಿದ ವಿಚಾರವನ್ನು ಕವಿಯು ದಾಖಲಿಸಿದ್ದಾನೆ. ವಿಜಯನಗರ ಸಾಮ್ರಾಜ್ಯವು ಇವರ ಕಾಲದಲ್ಲಿ ಸಂಪೂರ್ಣವಾಗಿ ಅವನತಿ ಹೊಂದಿ ಮೈಸೂರು ರಾಜ್ಯ ಸ್ವತಂತ್ರವಾದಾಗ ಈ ಪರಮಾಧಿಕಾರದ ಗುರುತಾಗಿ 'ಕಂಠೀರಾಯ' ಎಂಬ ಚಿನ್ನದ ನಾಣ್ಯಗಳನ್ನು ಮುದ್ರಿಸಿದರು. ಈ ನಾಣ್ಯಗಳನ್ನು ಮುದ್ರಿಸಲು ಶ್ರೀರಂಗಪಟ್ಟಣದಲ್ಲಿ ಟಂಕಶಾಲೆಯನ್ನು ನಿರ್ಮಿಸಿದ ವಿವರವನ್ನು ಕವಿ ನೀಡಿದ್ದಾನೆ. ಅರಕೆರೆಯ ಶಾಸನಗಳಲ್ಲಿಯೂ ಇದರ ಉಲ್ಲೇಖವಿರುವುದು ಕಂಡುಬರುತ್ತದೆ.[೫] ಅಂದಿನ ಸಂದರ್ಭಗಳಲ್ಲಿ ಪ್ರತಿ ಪಾಳೆಗಾರನು ತನ್ನದೇ ಆದ ನಾಣ್ಯವನ್ನು ಹೊರಡಿಸುವಂತಾಗಲು ನಾಣ್ಯ ವ್ಯವಸ್ಥೆಯಲ್ಲಿ ಹಲವಾರು ಗೊಂದಲಗಳು ಉಂಟಾದವು. ಆದ್ದರಿಂದ ಕ್ರಿ.ಶ.೧೬೪೫ರಲ್ಲಿ ಶ್ರೀರಂಗಪಟ್ಟಣದಲ್ಲಿ ಟಂಕಶಾಲೆ ಸ್ಥಾಪಿಸಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ಹೀಗೆ ನಾಣ್ಯ ವ್ಯವಸ್ಥೆಯಲ್ಲಿ ಶಿಸ್ತನ್ನು ಏರ್ಪಡಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ.

ಹೀಗೆ ನರಸರಾಜರ ಕಾಲದಲ್ಲಿ ಮೈಸೂರು ರಾಜ್ಯವು ವಿಸ್ತಾರವಾಗಿದ್ದಲ್ಲದೆ ದೃಢವಾಗಿ ಬೇರು ಬಿಟ್ಟಿತು. ಒಟ್ಟಾರೆಯಾಗಿ ಕವಿಯು ಕಂಠೀರವ ನರಸರಾಜ ಒಡೆಯರ್ ಅವರು ೨೫ ವರ್ಷ ರಾಜ್ಯವನ್ನು ಆಳಿದರೆಂದು ತಿಳಿಸಿದ್ದಾನೆ. ಆದರೆ ಇತಿಹಾಸದ ಮೂಲಗಳು ೨೧ ವರ್ಷ ಇವರು ಆಳ್ವಿಕೆ ನಡೆಸಿರುವುದಾಗಿ ತಿಳಿಸುತ್ತವೆ. ಇವರು ಶಾರ್ವರಿ ಸಂವತ್ಸರ ಮಾರ್ಗಶಿರ ೧೧ರಲ್ಲಿ ಅಂದರೆ ಕ್ರಿ.ಶ.೧೬೫೯ ರಲ್ಲಿ ಮರಣ ಹೊಂದಿದರು. ಈ ರೀತಿಯಾಗಿ ಕಂಠೀರವ ನರಸರಾಜ ಒಡೆಯರ್‌ರವರ ಪರಾಕ್ರಮ, ಆಡಳಿತ ಹಾಗೂ ರಾಜನೀತಿಯ ಜೊತೆಗೆ ತಮ್ಮ ಸಾಮ್ರಾಜ್ಯದ ವಿಸ್ತರಣೆಯೊಂದಿಗೆ ಮಹಾರಾಜರಿಗೆ ಇದ್ದಂತಹ ಜನಪರ ಕಾಳಜಿ ಮತ್ತು ಸಾಮಾಜಿಕ ಕಳಕಳಿಯ ಕುರಿತಾದ ಚಿತ್ರಣವನ್ನು ದೇವಚಂದ್ರನು ತನ್ನ ಕೃತಿಯಲ್ಲಿ ಸವಿವರವಾಗಿ ಕಟ್ಟಿಕೊಟ್ಟಿದ್ದಾನೆ.

**ಕೊನೆ ಟಿಪ್ಪಣಿ**

೧. ಸಣ್ಣಯ್ಯ ಬಿ.ಎಸ್ – ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ೧೯೮೮, ಪು. ಸಂ. ೩೩೯

೨. ರಾಮೇಗೌಡ – ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು,ಚಿತ್ರಕೂಟ ಪ್ರಕಾಶನ, ೧೯೯೨, ಪು.ಸಂ.೩೫೪

೩. ರಾಮಕೃಷ್ಣರಾವ್ ಬಿ – ಶ್ರೀಮನ್ಮಹಾರಾಜರವರ ವಂಶಾವಳಿ, ೧೯೧೬, ಪು.ಸಂ.೭೨

೪. ಗೋಪಾಲ್ ಬಾ. ರಾ – ಎಪಿಗ್ರಾಫಿಯ ಕರ್ನಾಟಿಕ,ಸಂಪುಟ–೩, ಪು.ಸಂ.೮೫

5. ನರಸಿಂಹಮೂರ್ತಿ ಎ.ವಿ – ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–೧೦, ಪು. ಸಂ. ixvii